**5ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ, ಮೈಸೂರು.**

**ಎಸ್.ಸಿ. ಸಂಖ್ಯೆ : 80/2024**

ಫಿರ್ಯಾದಿ :- ಸರ್ಕಾರದ ಪರ ಮೇಟಗಳ್ಳಿ ಪೊಲೀಸ್ ಠಾಣೆ

ವಿರುದ್ಧ

ಆರೋಪಿ :- ಪ್ರಮೋದ್ ಕುಮಾರ್ ಜೈನಾ ಬಿನ್ ಲೇಟ್ ನಿಲಮ್ಮ ಚೆನಾ, 43 ವರ್ಷ, ವಾಸಃ ನಂ. 45, 3 ನೇ ಕ್ರಾಸ್ , ಜಯದೇವನಗರ , ಮೇಟಗಳ್ಳಿ, ಮೈಸೂರು.
ಸ್ವಂತ ವಿಳಾಸಃ ಮರಿಯಗಾಂವ್ ಗ್ರಾಮ, ಹಟದಿಹಿ ತಾಲ್ಲೂಕು, ಕೆವುಂಜರ್ ಜಿಲ್ಲೆ, ಒಡಿಸ್ಸಾ ರಾಜ್ಯ.

ದೋಷಾರೋಪಣೆ

ನಾನು ಗುರುರಾಜ್ ಸೋಮಕ್ಕಳವರ್, ಐದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ, ಮೈಸೂರು, ನಿಮ್ಮನ್ನು ಈ ಕೆಳಕಂಡಂತೆ ದೋಷಾರೋಪಣೆಗೆ ಒಳಪಡಿಸುತ್ತಿದ್ದೇನೆ.

ಮೊದಲನೆಯದಾಗಿ, ಆರೋಪಿಯಾದ ನೀವು ಚಾಸಾ 3 ಸಚಿನ್ ಕುಮಾರ್ ಅವರ ಬಳಿ ಕೆಲಸ ಕೇಳಿಕೊಂಡು ಮೈಸೂರಿಗೆ ಬಂದು ಜಯದೇವನಗರದ 3 ನೇ ಕ್ರಾಸ್ ನಲ್ಲಿರುವ ಚಾಸಾ 10 ಮಂಜುನಾಥ್ ಅವರಿಗೆ ಸೇರಿದ ಬಾಡಿಗೆ ಮನೆಯಲ್ಲಿ ಮೃತೆ ಕಾಬೇರಿ ಗಡಾಯಿ, ನೀವು ಮತ್ತು ನಿಮ್ಮ ಮಗ ಚಾಸಾ 2 ಪ್ರತೀಕ್ ವಾಸವಾಗಿದ್ದು, ಚಾಸಾ 3 ಸಚಿನ್ ಕುಮಾರ್ ಮೃತೆಯೊಂದಿಗೆ ಸ್ನೇಹವನ್ನು ಬೆಳೆಸಿ, ಆಕೆಯ ಮೊಬೈಲ್ ನಂಬರ್ ಪಡೆದುಕೊಂಡು ಆಕೆಯೊಂದಿಗೆ ಆಗಾಗ ಮೇಸೇಜ್ ಮಾಡುವುದು, ಫೋನ್ ಮಾಡಿ ಮಾತನಾಡುವುದು ಮಾಡುತ್ತಾ, ನೀವು ಮನೆಯಲ್ಲಿ ಇಲ್ಲದ ಸಮಯದಲ್ಲಿ ನಿಮ್ಮ ಮನೆಗೆ ಬಂದು, ಮೃತೆಯೊಂದಿಗೆ ಸಲುಗೆಯನ್ನು ಬೆಳೆಸಿಕೊಂಡು, ಆಕೆಯೊಂದಿಗೆ ಅನೈತಿಕ ಸಂಬಂಧವನ್ನು ಹೊಂದಿ ಚಾಸಾ 3 ಸಚಿನ್ ರವರು ಮೃತೆಯೊಂದಿಗೆ ಲೈಂಗಿಕ ಕ್ರಿಯೆಯಲ್ಲಿ ತೊಡಗಿದ್ದನ್ನು ಕಂಡು ನೀವು ದಿನಾಂಕ 19.12.2023 ರಂದು ಮೃತೆ ಕಾಬೇರಿ ಗಡಾಯಿಯವರೊಂದಿಗೆ ಗಲಾಟೆ ಮಾಡಿ ಚಾಸಾ 3 ಸಚಿನ್ ಅವರೊಂದಿಗೆ ಮಾತನಾಡದಂತೆ, ಆತನೊಂದಿಗೆ ಸಂಬಂಧವನ್ನು ಬೆಳೆಸದಂತೆ ಎಚ್ಚರಿಕೆಯನ್ನು ನೀಡಿ , ಆಕೆ ಬಳಸುತ್ತಿದ್ದ ಮೊಬೈಲ್ ಅನ್ನು ಕಿತ್ತು ಇಟ್ಟುಕೊಂಡಿರುತ್ತೀರಿ. ಈ ಘಟನೆಯಿಂದ ಮೃತೆ

ಕಾಬೇರಿ ಗಡಾಯಿಯು ನಿಮ್ಮ ಮೇಲೆ ಮೇಟಗಳ್ಳಿ ಪೊಲೀಸ್ ಠಾಣೆಯಲ್ಲಿ ಜಿ.ಎಸ್.ಸಿ ನಂ. 775/2024 ದೂರು ನೀಡಿದ್ದು, ಆ ನಂತರದಲ್ಲಿ ಚಾಸಾ 3 ಸಚಿನ್ ರವರು ಮೃತೆ ಕಾಬೇರಿ ಗಡಾಯಿಯವರಿಗೆ ಬೇರೊಂದು ಮೊಬೈಲ್ ಮತ್ತು ಸಿಮ್ ಅನ್ನು ಕೊಡಿಸಿದ ಮೇರೆಗೆ ಮೃತೆಯು ಮತ್ತೆ ಚಾಸಾ 3 ಅವರೊಂದಿಗೆ ಮೊಬೈಲ್ ನಲ್ಲಿ ಮಾತನಾಡುತ್ತಿದ್ದನ್ನು ಕಂಡ ಆರೋಪಿಯಾದ ನೀವು, ನೀವು ಎಷ್ಟು ಹೇಳಿದರೂ ಮೃತೆಯು ಕೇಳದೇ ಮತ್ತೆ ಚಾಸಾ 3 ಸಚಿನ್ ರವರೊಂದಿಗೆ ಮಾತನಾಡಲು ಶುರು ಮಾಡಿದ್ದಾಳೆ. ಈಕೆ ಬದುಕಿದ್ದರೇ ತಾನೇ ನನ್ನನ್ನು ಬಿಟ್ಟು ಬೇರೊಬ್ಬ ಗಂಡಸಿನೊಂದಿಗೆ ಸಂಬಂಧ ಇಟ್ಟುಕೊಳ್ಳುವುದು ಇವಳನ್ನು ಮುಗಿಸಿಬಿಟ್ಟರೇ ಸರಿಯೆಂದು ನಿರ್ಧರಿಸಿಕೊಂಡು ದಿನಾಂಕ 02.01.2024 ರಂದು ರಾತ್ರಿ 8.00 ಗಂಟೆಯಿಂದ 8.30 ಗಂಟೆಯಲ್ಲಿ ಮೃತೆಯು ಅಡುಗೆ ಮನೆಯಲ್ಲಿ ಫೋನ್ ನಲ್ಲಿ ಮಾತನಾಡುತ್ತಿದ್ದಾಗ ನೀವು ಮೃತೆಯ ಕೂದಲನ್ನು ಹಿಡಿದು ಎಳೆಯುತ್ತಿದ್ದಾಗ ಮೃತೆಯು ಕಿರುಚಿಕೊಂಡಿದ್ದು, ಈ ಶಬ್ದವನ್ನು ಕೇಳಿ ಮನೆಯಲ್ಲಿ ಓದಿಕೊಳ್ಳುತ್ತಿದ್ದ ಚಾಸಾ 2 ಪ್ರತೀಕ್ ರವರು ಎದ್ದು ಬಂದು ತನ್ನ ತಾಯಿಯನ್ನು ಬಿಡುವಂತೆ ನಿಮ್ಮನ್ನು ತಡೆಯುತ್ತಿದ್ದಾಗ ನೀವು ಆಕೆಯನ್ನು ಬಿಡದೆ ಅಡುಗೆ ಮನೆಯ ಸೆಲ್ಫ್ ಮೇಲಿದ್ದ ಸ್ಟೀಲ್ ಚಾಕುವನ್ನು ಎತ್ತಿಕೊಂಡು ಮೃತೆಯ ಕುತ್ತಿಗೆಯನ್ನು ಕೂಯ್ದು ಕೊಲೆ ಮಾಡಿರುತ್ತೀರಿ. ಈ ಮೂಲಕ ನನ್ನ ಸಂಜ್ಞೆಗೆ ಒಳಪಟ್ಟು ಭಾ.ದಂ.ಸಂ. ಕಲಂ 302 ರಅಡಿಯಲ್ಲಿ ಅಪರಾಧವೆಸಗಿರುತ್ತೀರಿ.

(ಸದರಿ ದೋಷಾರೋಪಣೆಯು ಕನ್ನಡದಲ್ಲಿದ್ದು ಅದನ್ನು ಆರೋಪಿಗೆ ಹಿಂದೆ ಭಾಷೆಯಲ್ಲಿ ನವೀನ್ ವಕೀಲರು ತರ್ಜುಮೆ ಮಾಡಿ ಓದಿ ಹೇಳಿರುತ್ತಾರೆ )

ದಿನಾಂಕಃ 30/07/2024

( ಗುರುರಾಜ್ ಸೊಮಕ್ಕಳವರ್ )
ಐದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು.

ತರ್ಜುಮೆದಾರರ ಸಹಿ

5ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ, ಮೈಸೂರು.

ಎಸ್.ಸಿ. ಸಂಖ್ಯೆ ಃ 80/2024

| | | |
|---|---|---|
| ಫಿರ್ಯಾದಿ | ಃ- | ಸರ್ಕಾರದ ಪರ ಮೇಟಗಳ್ಳಿ ಪೊಲೀಸ್ ಠಾಣೆ |
| | | ವಿರುದ್ಧ |
| ಆರೋಪಿ | ಃ- | ಪ್ರಮೋದ್ ಕುಮಾರ್ ಜೈನಾ ಬಿನ್ ಲೇಟ್ ನಿಲಮ್ಮ ಚೆನಾ, 43 ವರ್ಷ, ವಾಸಃ ನಂ. 45, 3 ನೇ ಕ್ರಾಸ್ , ಜಯದೇವನಗರ , ಮೇಟಗಳ್ಳಿ, ಮೈಸೂರು.<br>ಸ್ವಂತ ವಿಳಾಸಃ ಮರಿಯಗಾಂವ್ ಗ್ರಾಮ, ಹಟದಿಹಿ ತಾಲ್ಲೂಕು, ಕೆವ್ರುಂಜರ್ ಜಿಲ್ಲೆ, ಒಡಿಸ್ಸಾ ರಾಜ್ಯ. |

ಆಪಾದನೆ

1. ಪ್ರಶ್ನೆಃ- ಈಗ ಓದಿ ಹೇಳಿದ ದೋಷಾರೋಪಣೆ ಅರ್ಥವಾಯಿತೆ?

ಉತ್ತರಃ-

2. ಪ್ರಶ್ನೆಃ- ಸದರಿ ದೋಷಾರೋಪಣೆಯನ್ನು ಒಪ್ಪಿಕೊಳ್ಳುವೆಯಾ ?

ಉತ್ತರಃ-

3. ಪ್ರಶ್ನೆಃ- ವಿಚಾರಣೆಯಾಗಬೇಕೆ?

ಉತ್ತರಃ-

ಆಪಾದಿತನ ಹೇಳಿಕೆಯನ್ನು ಅವನಿಗೆ ತಿಳಿದ ಭಾಷೆಯಲ್ಲಿ ವಿವರಿಸಿ ಯಥಾವತ್ತಾಗಿ ದಾಖಲಿಸಿಕೊಳ್ಳಲಾಗಿದೆ.

(ಸದರಿ ಆಪಾದನೆಯು ಕನ್ನಡದಲ್ಲಿದ್ದು ಅದನ್ನು ಆರೋಪಿಗೆ ಹಿಂದಿ ಭಾಷೆಯಲ್ಲಿ ನವೀನ್ ವಕೀಲರು ತರ್ಜುಮೆ ಮಾಡಿ ಓದಿ ಹೇಳಿರುತ್ತಾರೆ )

ದಿನಾಂಕಃ 30/07/2024

( ಗುರುರಾಜ್ ಸೋಮಕ್ಕಳವರ್ )
ಐದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು.

ತರ್ಜುಮೆದಾರರ ಸಹಿ